**ಸಿಸಿ ನಂ. 1305/2023**

**ಸಿ.ಡಬ್ಲೂ-11 ಪಿ.ಡ್ಲೂ:2**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಶಂಕ್ರೆಪ್ಪ ಸೇವಾಪೂರ @ ಶಿವಪೂರ |
| ತಂದೆ ಹೆಸರು | : | ರಾಮಣ್ಣ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಯಾಳಗಿ |

ದಿನಾಂಕ 28-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

ಚಾ.ಸಾ. 10 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇಲ್ಲ. ಚಾ.ಸಾ. 10 ರವರು ನನ್ನ ಊರಿನವರು. ಚಾ.ಸಾ. 10 ರವರು ಆಟೋ ಚಾಲಕ ಕೆಲಸ ಮಾಡುತ್ತಾರೆ. ಸುಮಾರು ಒಂದು ವರ್ಷದ ಹಿಂದೆ ನಾವು ಸಿಂದಗಿಗೆ ಗೊಬ್ಬರ ತರಲು ಬೈಕ್ ನಲ್ಲಿ ಬಂದಿದ್ದವು. ರಾತ್ರಿ ಆಗಿದ್ದರಿಂದ ಯಂಕಂಚಿ ಸುಣಗಾರ ಲಾಡ್ಜ ನಲ್ಲಿ ನಾವು ಉಳಿದುಕೊಂಡಿದ್ದೇವು. ನಂತರ ನಾವು ಲಾಡ್ಜ ನಲ್ಲಿ ಇದ್ದಾಗ ಸರಾಯಿ ಕುಡಿದಿದ್ದು, ಪೊಲೀಸರು ಬಂದು ನಮ್ಮನ್ನು ಕರೆದುಕೊಂಡು ಸಿಂದಗಿ ಪೊಲೀಸ್ ಠಾಣೆಗೆ ಬಂದಿರುತ್ತಾರೆ. ಪೊಲೀಸರು ನನ್ನ ಜೊತೆ ಇನ್ನು ಇಬ್ಬರನ್ನು ಲಾಡ್ಜನಿಂದ ಕರೆದುಕೊಂಡು ಬಂದಿದ್ದರು. ಮದ್ಯಾಹ್ನ 12-00 ಗಂಟೆಗೆ ನಮ್ಮ ಬಿಟ್ಟಿರುತ್ತಾರೆ. ಯಾವ ಕಾರಣಕ್ಕಾಗಿ ನಮ್ಮನ್ನು ಕರೆದುಕೊಂಡು ಬಂದಿದ್ದೀರಿ ಎಂದು ಕೇಳಿದ್ದಕ್ಕೆ ಪೊಲೀಸರು ಏನು ಹೇಳಿಲ್ಲ. ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿಲ್ಲ.

**ಸಿಸಿ ನಂ. 1305/2023**

**ಸಿ.ಡಬ್ಲ್ಯೂ–11 ಪಿ.ಡ್ಲೂ:2**

**(ಈ ಹಂತದಲ್ಲಿ ಸರಕಾರಿ ಸಹಾಯಕರು ಅಭೀಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಸರಕಾರಿ ಸಹಾಯಕ ಅಭೀಯೋಜಕ ರವರಿಂದ.**

ದಿ.01–08–2022 ರಂದು ರಾತ್ರಿ 1–30 ಗಂಟೆ ಸುಮಾರಿಗೆ ಯಂಕಂಚಿ ಗ್ರಾಮದ ಆನಂದ ಬೊರ್ಡಿಂಗ ಮತ್ತು ಲಾಡ್ಜಿಂಗ ಮತ್ತು ರೇಸ್ಟೋರೆಂಟ್ ನ ರೂಮ ನಂ.201,202,209,207 ರ ಮೇಲೆ ಪೊಲೀಸರು ದಾಳಿ ಮಾಡಿದ್ದರು ಎಂದರೆ ಸರಿ. 1 ನೇ ಆರೋಪಿಯು ಸದರಿ ಲಾಡ್ಜ ನ ಮ್ಯಾನೇಜರ್ ಇದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿಯು ಸದರಿ ಲಾಡ್ಜ ನ ಮಾಲೀಕರು ಎಂದರೆ ಸರಿಯಲ್ಲ.

1 ನೇ ಆರೋಪಿಯು ಪ್ರಿಯಾಂಕಾ, ಶಾನುಬಾಯಿ, ಇಂದುಬಾಯಿ, ಮತ್ತು ಸೋಮಿ ಶೇಖ ರವರ ನ್ನು ಅನೈತಿಕ ಚಟುವಟಿಕೆಯ ಸಲುವಾಗಿ ಸದರಿ ಲಾಡ್ಜ ನಲ್ಲಿ ಇಟ್ಟು ಕೊಂಡಿದ್ದರು ಎಂದರ ಸರಿಯಲ್ಲ. ಅನೈತಿಕ ಚಟುವಟಿಕೆಗೆ ಸದರಿ ಲಾಡ್ಜ ನಲ್ಲಿ ಸ್ಥಳಾವಕಾಶ ಮಾಡಿಕೊಟ್ಟಿದ್ದ ಎಂದರೆ ಸರಿಯಲ್ಲ. ರೂಮ ನಂ.201,202,209,207 ರಲ್ಲಿ ಆ ದಿನ ಅನೈತಿಕ ಚಟುವಟಿಕೆಗಳು ನಡೆಯುತ್ತಿದ್ದವು ಎಂದರೆ ಸರಿಯಲ್ಲ. ಆ ದಿನ ನಾನು, ಚಾ.ಸಾ. 10 ಮತ್ತು 12 ರವರು ಗಿರಾಕಿಗಳು ಆಗಿ ಸದರಿ ಲಾಡ್ಜ ನಲ್ಲಿ ಉಳಿದುಕೊಂಡಿದ್ದೇವು ಎಂದರೆ ಸರಿಯಲ್ಲ.

ನನ್ನಿಂದ ಲಾಡ್ಜ ಬಾಡಿಗೆ ರೂ. 600/– ಮತ್ತು ಅನೈತಿಕ ಚಟುವಟಿಕೆಗಾಗಿ ಒಬ್ಬರಿಗೆ ರೂ. 2000/– ನ್ನು ಆರೋಪಿ ನಂ. 1 ರವರು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ಚಾ.ಸಾ. 11 ರವರು ಸೇರಿ ರೂ. 1200/– ಬಾಡಿಗೆ ಮತ್ತು ರೂ. 4000/– ನ್ನು ಅನೈತಿಕ ಚಟುವಟಿಕೆಗಾಗಿ ಕೊಟ್ಟು ಅಲ್ಲಿ ಉಳಿದುಕೊಂಡಿದ್ದೇವು ಎಂದರೆ ಸರಿಯಲ್ಲ. ಪೊಲೀಸರು ಬಂದು ಬಾಗಿಲನ್ನು ಬಡಿದು ಬಾಗಿಲನ್ನು ತೆರೆಯುವಂತೆ ಹೇಳಿದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಪೊಲೀಸರು ಅಲ್ಲಿ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ನಂತರ ಪೊಲೀಸರು 1 ನೇ ಆರೋಪಿಯ ಕಡೆಯಿಂದ ರೂ.7000/– ನ್ನು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಿರೋಧಗಳನ್ನು ಜಪ್ತಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಮಹಿಳಾ ಸಿಬ್ಬಂದಿಗಳ ಸಹಾಯದಿಂದ ಸದರಿ 4 ಜನ ಹೆಣ್ಣು ಮಕ್ಕಳನ್ನು ವಿಚಾರಿಸಿ ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳುಹಿಸಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ಪೊಲೀಸರ ಮುಂದೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿ.ಪಿ. 2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ; ಆರೋಪಿತರ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ಸಿಂದಗಿ